ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳಲ್ಲಿ ಪಡಿತರ ಚೀಟಿ ವಿತರಣೆ.

3031(3494)

ಶ್ರೀ ಹೊನ್ನಳ್ಳಿ ಜಬ್ಬರ್‌ಖಾನ್ ಹೈಯತ್ ಖಾನ್(ಹುಬ್ಬಳ್ಳಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಪಡಿತರ ಚೀಟಿ ಸರಬರಾಜು ಇಲ್ಲದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಧಾರವಾಡ ಜಿಲ್ಲೆಯಲ್ಲಿ 2000-01, 2001-02ರಲ್ಲಿ ನವಲಗುಂದ, ಕಲಘಟಗಿ, ಕುಂದಗೋಳ, ಹುಬ್ಬಳ್ಳಿ ಗ್ರಾಮೀಣ, ಧಾರವಾಡ ಗ್ರಾಮೀಣ ಹಾಗೂ ಹುಬ್ಬಳ್ಳಿ ಧಾರವಾಡ ನಗರ ವ್ಯಾಪ್ತಿಯಲ್ಲಿ ಪಡಿತರ ಚೀಟಿ ಬಯಸಿ ಬಂದ ಅರ್ಜಿ ಸಂಖ್ಯೆಗಳೆಷ್ಟು? ಈವರೆಗೆ ಪಡಿತರ ಚೀಟಿ ನೀಡಿರುವ ಸಂಖ್ಯೆ ಎಷ್ಟು?

ಇ) ಅತೀ ಅವಶ್ಯಕತೆಯಾದ ಪಡಿತರ ಚೀಟಿಯನ್ನು ಸಾರ್ವಜನಿಕರಿಗೆ ನೀಡಲು ಸರ್ಕಾರ ವಿಳಂಬ ಮಾಡುತ್ತಿರಲು ಕಾರಣಗಳೇನು? ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮವೇನು?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮುಖ್ಯ ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) ಇಲ್ಲ.

ಆ)

| ಕ್ರಮ ಸಂಖ್ಯೆ | ತಾಲ್ಲೂಕು : ಪಡಿತರ ಪ್ರದೇಶದ ಹೆಸರು | ಪಡಿತರ ಚೀಟಿ ಕೋರಿ ಬಂದ ಅರ್ಜಿಗಳ ಸಂಖ್ಯೆ | ವಿತರಣೆ ಮಾಡಿದ ಪಡಿತರ ಚೀಟಿ ಸಂಖ್ಯೆ | ತಿರಸ್ಕೃತ ಗೊಂಡ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಅರ್ಜಿಗಳು |
|---|---|---|---|---|---|
| 01 | ಧಾರವಾಡ ಪಡಿತರ | 1965 | 1524 | 232 | 199 |

| | | | | | |
|---|---|---|---|---|---|
| 02 | ಹುಬ್ಬಳ್ಳಿ ಪಡಿತರ | 3319 | 1882 | 494 | 943 |
| 03 | ಧಾರವಾಡ ಗ್ರಾಮಾಂತರ | 600 | 436 | 40 | 124 |
| 04 | ಹುಬ್ಬಳ್ಳಿ ಗ್ರಾಮಾಂತರ | 77 | 77 | - | - |
| 05 | ನವಲಗುಂದ | 676 | 546 | 29 | 101 |
| 06 | ಕಲಘಟಗಿ | 3460 | 693 | 2753 | 14 |
| 07 | ಕುಂದಗೋಳ | 595 | 42 | 319 | 234 |
| | ಒಟ್ಟು | 10682 | 5200 | 3867 | 1615 |

ಇ) ಪಡಿತರ ಚೀಟಿಗಳನ್ನು ಯಾವುದೇ ವಿಳಂಬವಿಲ್ಲದೇ ಸಾರ್ವಜನಿಕರಿಗೆ ನೀಡುವ ಸಲುವಾಗಿ ದಿನಾಂಕ: 1.2.2000ರಂದು ಸರ್ಕಾರ ಆದೇಶ ಹೊರಡಿಸಿದ ಪಡಿತರ ಚೀಟಿಗಳನ್ನು ನೀಡುವ ವಿಧಾನವನ್ನು ಸರಳೀಕರಣಗೊಳಿಸಲಾಗಿದೆ ಮತ್ತು ಪಡಿತರ ಚೀಟಿಗಳನ್ನು ನೀಡುವ ಅಧಿಕಾರವನ್ನು ವಿಕೇಂದ್ರಿಕರಣಗೊಳಿಸಿದೆ. ಪಡಿತರ ಚೀಟಿ ಕೋರಿ ಸಲ್ಲಿಸುವ ಅರ್ಜಿಗಳನ್ನು 30 ದಿವಸಗಳ ಒಳಗೆ ಕ್ರಮ ವಹಿಸುವಂತೆ ಸೂಚನೆಗಳನ್ನು ನೀಡಲಾಗಿದೆ. ಉದ್ದೇಶ ಪೂರ್ವಕವಾಗಿ ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ಕಾನೂನಿನ ಅನ್ವಯ ಶಿಸ್ತು ಕ್ರಮ ಜರುಗಿಸಲಾಗುವುದು.

ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ವಿಶ್ವಬ್ಯಾಂಕ್ ನೆರವು.

3032(3454)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್‌ನಿಂದ ರಾಜ್ಯದ ಕುಡಿಯುವ ನೀರಿನ ಯೋಜನೆಗಳಿಗಾಗಿ ಕಳೆದ 3 ವರ್ಷಗಳಿಂದ ಬಿಡುಗಡೆಯಾದ ಹಣ ಎಷ್ಟು?

ಆ) ಈ ಹಣದಿಂದ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ? ಎಷ್ಟು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)